ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 19/9/20

### ವಿಪಕ್ಷಗಳಿಂದ ಅಪಪ್ರಚಾರ: ಮೋದಿ ಆರೋಪ | ಅಕಾಲಿ ನಾಯಕರ ಸಮಾಲೋಚನೆ

# ಕೃಷಿ ಶಾಸನ ಜೇನುಗೂಡಿಗೆ ಕಲ್ಲು

ನವದೆಹಲಿ: ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪಾರ್ಲಿಮೆಂಟ್‌ನಲ್ಲಿ ಅನುಮೋದನೆ ಪಡೆದುಕೊಂಡಿರುವ ಮೂರು ಕಾಯ್ದೆಗಳ ಬಗ್ಗೆ ತಪ್ಪು ಮಾಹಿತಿಯನ್ನು ಹರಡಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟಿದ್ದಾರೆ.

ರೈತರಿಗೆ ಉತ್ತಮ ಬೆಲೆ ದೊರೆಯುವುದಿಲ್ಲ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಆದರೆ ದೇಶದ ರೈತರು ಎಷ್ಟು ಪ್ರಜ್ಞಾವಂತರು ಎನ್ನುವುದನ್ನು ಹೀಗೆ ಅಪಪ್ರಚಾರ ಮಾಡುತ್ತಿ ರುವವರು ಮರೆತಂತೆ ಕಾಣುತ್ತದೆ ಎಂದರು. ಬಿಹಾರದ ಕೋಶಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ರೈಲ್ವೆ ಸೇತುವೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಗೋದಿ ಮತ್ತು ಅಕ್ಕಿಯನ್ನು ಸರ್ಕಾರಿ ಏಜನ್ಸಿಗಳೇ ಖರೀದಿ ಮಾಡುತ್ತವೇ ಎಂದು ಕೂಡ ವಿಪಕ್ಷಗಳು ಹೇಳುತ್ತಿದ್ದು, ಇದು ಸುಳ್ಳು. ಇಂಥವರ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದು ರೈತರಿಗೆ ಮನವಿ ಮಾಡಿದರು. ಈ ರೀತಿ ಸುಳ್ಳು ಸುದ್ದಿ ಹರಡಲು ನಿಮ್ಮನ್ನು ಪ್ರಚೋದಿ ಸಬೇಕು ಎನ್ನುವುದೊಂದೇ ಕಾರಣ. ಅವರು ಅಧಿಕಾರದಲ್ಲಿದ್ದಾಗ ರೈತರ ಬಗ್ಗೆ ಬೇಕಾ ದಷ್ಟು ಮಾತನಾಡಿ ಏನನ್ನೂ ಮಾಡದೇ ಹೋದರು ಎಂದರು. ಯಾರು ಮಧ್ಯವರ್ತಿಗಳೊಂದಿಗೆ ನಿಂತಿದ್ದಾರೆ ಎನ್ನುವುದನ್ನು ರೈತರು ನಿಚ್ಚಳವಾಗಿ ನೋಡುತ್ತಿದ್ದಾರೆ ಎಂದರು.

ಮತ್ತೊಂದೆಡೆ, ವಾಹಿನಿಯೊಂದಕ್ಕೆ ಸಂದರ್ಶನ ನೀಡಿರುವ ಮಾಜಿ ಆಹಾರ ಸಂಸ್ಕರಣಾ ಸಚಿವೆ ಹರಸಿಮ್ರತ್ ಕೌರ್, ಈ ವಿಧೇಯಕಗಳನ್ನು ಮಂಡಿಸುವಾಗ ಸಂಬಂಧಪಟ್ಟವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದೆ. ಇದರಲ್ಲಿ ತಪ್ಪೇನು ಎಂದಿದ್ದಾರೆ.

- ಹೊಸ ಕಾಯ್ದೆಗಳಿಂದ ರೈತರ ಉತ್ಪನ್ನಗಳಿಗೆ ಬೆಲೆ ಸಿಗುವುದಿಲ್ಲ ಎನ್ನುವ ಆರೋಪ ಸುಳ್ಳು
- ರೈತರನ್ನು ಎತ್ತಿಕಟ್ಟಲು ವಿಪಕ್ಷಗಳಿಂದ ಅಪಪ್ರಚಾರ
- ವಿಪಕ್ಷಗಳಿಂದ ರೈತರನ್ನು ಎತ್ತಿಕಟ್ಟುವ ತಂತ್ರ



## ಕೌರ್ ರಾಜೀನಾಮೆ ಅಕಾಲಿ ತಳಮಳ

ನವದೆಹಲಿ: ಕೇಂದ್ರ ಸರ್ಕಾರ ಮಂಡಿಸಿದ ಮೂರು ಕೃಷಿ ವಿಧೇಯಕಗಳಿಗೆ ವಿರೋಧ ವ್ಯಕ್ತಪಡಿಸಿ ಕೇಂದ್ರ ಆಹಾರ ಸಂಸ್ಕರಣಾ ಸಚಿವೆ ಹರಸಿಮ್ರತ್ ಕೌರ್ ರಾಜೀನಾಮೆ ನೀಡಿದ ಬಳಿಕ ಇದೀಗ ಮುಂದಿನ ಭವಿಷ್ಯ ನಿರ್ಧರಿಸಲು ಶಿರೋಮಣಿ ಅಕಾಲಿದಳ ನಾಯಕರ ಸಮಾಲೋಚನಾ ಸಭೆಗಳು ನಡೆದಿವೆ.

ಈ ತಕ್ಷಣವೇ ಸಭೆಯಲ್ಲಿ ಯಾವುದೇ ನಿರ್ಧಾರ ತೆಗೆದುಕೊಳ್ಳದಿದ್ದರೂ, ಜನರ ಅಭಿಪ್ರಾಯವನ್ನು ಪಡೆದುಕೊಳ್ಳಲು ಸಂಸತ್ ಅಧಿವೇಶನದ ನಂತರ ಒಂದು ನಿರ್ಣಯಕ್ಕೆ ಬರಲಾಗುತ್ತದೆ ಎಂದು ಎಸ್‌ಎಡಿ ನಾಯಕರೊಬ್ಬರು ಸ್ಪಷ್ಟಪಡಿಸಿದ್ದಾರೆ.

ಗಡಿಯಲ್ಲಿ ಭಾರತ ಮತ್ತು ಚೀನಾ ಸೈನಿಕರು ಮುಖಾಮುಖಿ ನಿಂತಿದ್ದಾರೆ. ಪೂರ್ವ ಲಡಾಖ್ ಇನ್ನೂ ಉದ್ವಿಗ್ನ ಪರಿಸ್ಥಿತಿಯಲ್ಲಿದೆ. ಸರ್ಕಾರ ಈ ಸವಾಲುಗಳನ್ನು ಎದುರಿಸುತ್ತಿರುವ ಸಂಗತಿ ಯನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಎಸ್‌ಎಡಿ ನಾಯಕ ಪ್ರಕಾಶ್ ಸಿಂಗ್ ಬಾದಲ್ ಎನ್‌ಡಿಎಯಲ್ಲಿ ತಂದೆ ಸಮಾನರಾಗಿದ್ದು, 2019ರಲ್ಲಿ ವಾರಾಣಸಿಯಲ್ಲಿ ಮೋದಿ ಅವರು ನಾಮಪತ್ರ ಸಲ್ಲಿಸುವ ಮುನ್ನ ಬಾದಲ್ ಅವರ ಪಾದಮುಟ್ಟಿ ನಮಸ್ಕರಿಸಿದ್ದರು. ಇವನ್ನು ನಿರ್ಲಕ್ಷಿಸುವಂತಿಲ್ಲ ಎಂದಿದ್ದಾರೆ.

ಎಂಬತ್ತರ ದಶಕದಲ್ಲಿ ಪಂಜಾಬ್‌ನಲ್ಲಿ ಸಾಂಪ್ರದಾಯಿಕ ಸಿಖ್ ಪಕ್ಷ ಹಾಗೂ ಕಟ್ಟರ್ ಹಿಂದುತ್ವವಾದಿ ಪಕ್ಷಗಳ ನಡುವೆ ಮೈತ್ರಿ ಆರಂಭವಾಗಿತ್ತು. ಹೀಗಾಗಿ ಎನ್‌ಡಿಎಯಲ್ಲಿ ಎಸ್‌ಎಡಿ ಅತಿ ಹಳೆಯ ಮಿತ್ರ ಪಕ್ಷವಾಗಿದೆ. ಆದರೆ ಕೇಂದ್ರ ಸರ್ಕಾರ ಇದೀಗ ಕೃಷಿ ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ವ್ಯವಸ್ಥೆ) ವಿಧೇಯಕ, ರೈತರ (ಸಬಲೀಕರಣ ಮತ್ತು ಸುರಕ್ಷೆ) ಕೃಷಿ ಉತ್ಪನ್ನ ಬೆಲೆ ಭರವಸೆ ಮತ್ತು ಕೃಷಿ ಸೇವೆಗಳ ವಿಧೇಯಕ ಹಾಗೂ ಅಗತ್ಯ ವಸ್ತುಗಳ ತಿದ್ದುಪಡಿ ವಿಧೇಯಕಗಳನ್ನು ತರಲು ಹೊರಟಿರುವುದು ಎಸ್‌ಎಡಿಯಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.